*ಇ) ಪ್ರಾರಂಭ ಮಾಡಿದಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.*

*ಈ) ಹಾಗಿಲ್ಲದಿದ್ದಲ್ಲಿ ಮಾಡದೇ ಇರುವುದಕ್ಕೆ ಕಾರಣಗಳೇನು?*

*ಉ) ಯಾವಾಗ ಪ್ರಾರಂಭ ಮಾಡಲಾಗುವುದು?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೌದು.

ಆ) 1996-97ನೇ ಸಾಲಿನ ಆಯವ್ಯದಲ್ಲಿರುವ ಎಲ್ಲಾ ಕ್ಷೇತ್ರಗಳಲ್ಲಿ ಪ್ರಾರಂಭಿಸಲಾಗಿದೆ.

ಇ) 1996-97ನೇ ಸಾಲಿಗೆ 2090.00 ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗಿದೆ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

## ಬಿಜಾಪುರ ಜಿಲ್ಲೆಯ ಬೀಳಗಿ ಮತಕ್ಷೇತ್ರದಲ್ಲಿ ಹೊಸರಂಗಮಂದಿರ ನಿರ್ಮಾಣ.

1039 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) 1996-97ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ರಂಗ ಮಂದಿರಗಳನ್ನು ಹೊಸದಾಗಿ ನಿರ್ಮಿಸಲು ಮಂಜೂರು ಮಾಡಲಾಗಿದೆ (ತಾಲ್ಲೂಕವಾರು ಮಾಹಿತಿ ಒದಗಿಸುವುದು)*

*ಆ) ಹಾಗಾದಲ್ಲಿ ಯಾವಾಗ ಮಂಜೂರು ಮಾಡಲಾಗುವುದು.*

*ಇ) ಕಳೆದ ಒಂದೂವರೆ ವರ್ಷದಿಂದ ಬೀಳಗಿ ಮತ ಕ್ಷೇತ್ರದಲ್ಲಿ ರಂಗಮಂದಿರಗಳ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ 1997-98ನೇ ಸಾಲಿನಲ್ಲಿ ಮಂಜೂರು ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) 23 ವಿವರಗಳನ್ನು ಅನುಬಂಧದಲ್ಲಿ ಕೊಟ್ಟಿದೆ.

ಆ) 'ಅ' ಕ್ಕೆ ನೀಡಿರುವ ಉತ್ತರದಂತೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಹೌದು. ಪರಿಶೀಲಿಸಲಾಗುವುದು.

## ಅನುಬಂಧ

| | | ತಾಲ್ಲೂಕು | ಗ್ರಾಮ |
|---|---|---|---|
| | **ಬಳ್ಳಾರಿ ಜಿಲ್ಲೆ** | | |
| 1) | ಬಳ್ಳಾರಿ | ಶಿರಗುಪ್ಪ | ಶಿಂಗೇರಿ |
| 2) | ಬಳ್ಳಾರಿ | ಹಡಗಲಿ | ವರಕನಹಳ್ಳಿ |
| 3) | ಬಳ್ಳಾರಿ | ಹಡಗಲಿ | ಮಾಗಳ |
| 4) | ಬಳ್ಳಾರಿ | ಹರಪನಹಳ್ಳಿ | ಬಳಗಾನೂರು |
| 5) | ಬಳ್ಳಾರಿ | ಹರಪನಹಳ್ಳಿ | ಮೈದೂರು |
| 6) | ಬಳ್ಳಾರಿ | ಹಗರಿಬೊಮ್ಮನಹಳ್ಳಿ | ನೆಲ್ಲಿಕುದುರಿ |
| | **ಧಾರವಾಡ ಜಿಲ್ಲೆ :** | | |
| 7) | ಧಾರವಾಡ | ಕುಂದಗೋಳ (ತಾ) | ರುರಬ್ಬಿಗವಾಡ |
| 8) | ಧಾರವಾಡ | ರಾಣೆಬೆನ್ನೂರು(ತಾ) | ತುಮ್ಮಿನಕಟ್ಟಿ |
| 9) | ಧಾರವಾಡ | ಗದಗ (ತಾ) | ಮುಳಗುಂದ |
| | **ಬೆಳಗಾಂ ಜಿಲ್ಲೆ** | | |
| 10) | ಬೆಳಗಾಂ | ಅಥಣಿ | ಅಡವಳ್ಳಿ |
| 11) | ಬೆಳಗಾಂ | ಅಥಣಿ | ಅಥಣಿ |
| 12) | ಬೆಳಗಾಂ | ಅಥಣಿ | ಎಗಳಿ |
| 13) | ಬೆಳಗಾಂ | ಅಥಣಿ | ಮಲ್ಲಿಬಾದ |
| | **ಉತ್ತರ ಕನ್ನಡ ಜಿಲ್ಲೆ** | | |
| 14) | ಉತ್ತರ ಕನ್ನಡ | ಯಲ್ಲಾಪುರ ತಾ | ಯಲ್ಲಾಪುರ |
| 15) | ಉತ್ತರ ಕನ್ನಡ | ಹಳಿಯಾಳ | ತೇರಗಾಂವ |
| | **ಬಿಜಾಪುರ ಜಿಲ್ಲೆ** | | |
| 16) | ಬಿಜಾಪುರ | ಮುದ್ದೋಳ | ಬೆಳಗಲಿ |
| 17) | ಬಿಜಾಪುರ | ಸಾರವಾಡ | ಸಾರವಾಡ |

| | | ತಾಲ್ಲೂಕು | ಗ್ರಾಮ |
|---|---|---|---|
| 18) | ಬಿಜಾಪುರ | ಇಂಡಿ | ಬಿ.ಕೆ. ಕಾಲೋನಿ |
| | **ಬೀದರ್ ಜಿಲ್ಲೆ** | | |
| 19) | ಬೀದರ್ | ಹುಮ್ನಾಬಾದ್ | ಇಟಗಾ |
| | **ಚಿತ್ರದುರ್ಗ ಜಿಲ್ಲೆ** | | |
| 20) | ಚಿತ್ರದುರ್ಗ | ಹೊಸದುರ್ಗ(ತಾ) | ಕಿಟ್ಟದಾಳ |
| 21) | ಚಿತ್ರದುರ್ಗ | ಹೊಳತಾರೆ | ಹೊಳಲ್ಕೆರೆ |
| | **ಶಿವಮೊಗ್ಗ ಜಿಲ್ಲೆ** | | |
| 22) | ಶಿವಮೊಗ್ಗ | ಭದ್ರಾವತಿ | ಬಾರಂದೂರು |
| | **ಚಿಕ್ಕಮಗಳೂರು ಜಿಲ್ಲೆ** | | |
| 23) | ಚಿಕ್ಕಮಗಳೂರು | ಕಡೂರು | ಮಂಚನಹಳ್ಳಿ |

**ಹೊಸ ಪಶುಚಿಕಿತ್ಸಾ ಕೇಂದ್ರಗಳನ್ನು ತೆರೆಯುವುದು.**

1040 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

*ಅ) 1996-97ನೇ ಸಾಲಿನಲ್ಲಿ ಹೊಸದಾಗಿ ಪಶುಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗಿದೆಯೇ;*

*ಆ) ಹಾಗಿದ್ದಲ್ಲಿ ಕ್ಷೇತ್ರವಾರು ಮಾಹಿತಿ ಒದಗಿಸುವುದು;*

*ಇ) ಹಾಗಿಲ್ಲದಿದ್ದಲ್ಲಿ ಯಾವಾಗ ಮಂಜೂರು ಮಾಡಲಾಗುವುದು ಹಾಗೂ ಕ್ಷೇತ್ರವಾರು ಹಂಚಿಕೆ ಮಾಡಲಾಗುವುದೇ ?*

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಹೌದು

ಆ) ಪಶುವೈದ್ಯಕೀಯ ಸಂಸ್ಥೆಗಳನ್ನು ಪ್ರಾರಂಭಿಸಲು ಗ್ರಾಮಗಳ ಆಯ್ಕೆಯು ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.